# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ ಹುಬ್ಬಳ್ಳಿ-580 025

ಫೋನ್ 0836-2222392, ಫ್ಯಾಕ್ಸ್-0836-2223392


**ಸಂಖ್ಯೆ: ಕರಾಕಾವಿ/2019-20/1376** **ದಿನಾಂಕ: 28/10/2019**

ಮಾನ್ಯರೆ,

**ವಿಷಯ : ಏಳನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ ದಿನಾಂಕ: 23 ಮತ್ತು 24 ನವೆಂಬರ್ 2019.**

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಏಳನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆಯನ್ನು ದಿನಾಂಕ: 23 ಮತ್ತು 24 ನವೆಂಬರ್ 2019 ರಂದು ಏರ್ಪಡಿಸುತ್ತಿದೆ ಎಂದು ತಿಳಿಸಲು ಸಂತೋಷವೆನಿಸುತ್ತಿದೆ. ಈ ಸ್ಪರ್ಧೆಯ ಯಶಸ್ಸಿಗೆ ತಮ್ಮೆಲ್ಲರ ಸಹಕಾರ ಅತ್ಯಮೂಲ್ಯ. ತಮ್ಮ ಮಹಾವಿದ್ಯಾಲಯದ ತಂಡವನ್ನು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಆಮಂತ್ರಿಸುತ್ತಿದ್ದೇವೆ. ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಸಮಸ್ಯೆಯನ್ನು ಮತ್ತು ಇತರೆ ನಿಯಮಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಹೆಚ್ಚಿನ ಮಾಹಿತಿಗಾಗಿ ತಾವು ಈ ಕೆಳಗಿನವರನ್ನು ಸಂಪರ್ಕಿಸಬಹುದು.

| | |
|---|---|
| 1. ಪ್ರೊ. ಸಿ.ಎಸ್.ಪಾಟೀಲ | 9845431663 |
| 2. ಡಾ. ಜಿ.ಬಿ.ಪಾಟೀಲ | 9448317129 |
| 3. ಡಾ. ರಂಗಸ್ವಾಮಿ ಡಿ. | 9964286178 |
| 4. ಶ್ರೀ ಸುನೀಲ ಬಗಾಡೆ | 8105157284 |
| **ಸಂಪರ್ಕಿಸಲು ವಿಳಾಸ:** | ಸಂಯೋಜಕರು, ಏಳನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ<br>ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ನವನಗರ,<br>ಹುಬ್ಬಳ್ಳಿ- 580025 |
| | **ಇ-ಮೇಲ್:** kslulawschool@gmail.com |

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸದ

**ಕುಲಸಚಿವರು**

ಇವರಿಗೆ:

ಪ್ರಾಂಶುಪಾಲರು, ಕಾನೂನು ಮಹಾವಿದ್ಯಾಲಯಗಳು, ಕ.ರಾ.ಕಾ.ವಿ. ಹುಬ್ಬಳ್ಳಿ.

# ಕಲ್ಪಿತ ನ್ಯಾಯಾಲಯ ಸ್ಪರ್ಧೆಗೆ ಸಂಬಂಧಿಸಿದ ನಿಯಮಗಳು

ಸಾಮಾನ್ಯ ನಿಯಮಗಳು:

1) ಭಾರತದ ವಕೀಲ ಪರಿಷತ್‌ನಿಂದ ಮಾನ್ಯತೆ ಪಡೆದ ಕರ್ನಾಟಕ ರಾಜ್ಯದಲ್ಲಿಯ ಎಲ್ಲ ಕಾನೂನು ಮಹಾವಿದ್ಯಾಲಯಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಹೊಂದಿರುತ್ತವೆ.

2) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಎಲ್ಲ ಕಾನೂನು ಮಹಾವಿದ್ಯಾಲಯಗಳು, ಇಬ್ಬರು ವಾದ ಮಂಡಿಸುವ ಮತ್ತು ಒಬ್ಬ ಸಂಶೋಧನಾ ವಿದ್ಯಾರ್ಥಿಗಳನ್ನೊಳಗೊಂಡ ಮೂರು ಜನರ ತಂಡವನ್ನು ಸ್ಪರ್ಧೆಗೆ ಕಳುಹಿಸಬೇಕು.

3) ಸ್ಪರ್ಧೆಯು ಪ್ರಾರಂಭವಾಗುವದಕ್ಕಿಂತ ಮುಂಚೆ ವಾದಿ ಮತ್ತು ಪ್ರತಿವಾದಿ ತಂಡಗಳ ಸ್ಪರ್ಧಾ ಪಟ್ಟಿಯನ್ನು ಚೀಟಿ ಎತ್ತುವ ಮೂಲಕ ತಯಾರಿಸಲಾಗುವದು. ನಂತರದ ಹಂತದ ಸ್ಪರ್ಧೆಗೆ 15 ನಿಮಿಷ ಮುಂಚಿತವಾಗಿ ಸ್ಪರ್ಧಾಪಟ್ಟಿಯನ್ನು ತಯಾರಿಸಲಾಗುವದು.

4) ಸಂಘಟಕರು ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಯಾವುದೇ ತಂಡಗಳ ಪ್ರವಾಸ ಖರ್ಚನ್ನು ನೀಡುವದಿಲ್ಲ. ಆದರೆ, ಸ್ಪರ್ಧಾ ದಿನಗಳಂದು ಸ್ಪರ್ಧಾಳುಗಳಿಗೆ ಉಚಿತ ಊಟ ಹಾಗೂ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗುವದು.

5) ಈ ಸ್ಪರ್ಧೆಯನ್ನು ಕನ್ನಡ ಭಾಷೆಯಲ್ಲಿ ನಡೆಸಲಾಗುವದು.

6) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 20 ನವೆಂಬರ್ 2019 ರೊಳಗಾಗಿ ತಮ್ಮ ಭಾಗವಹಿಸುವಿಕೆಯನ್ನು ಖಚಿತಪಡಿಸಬೇಕು.

7) ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ವಿಷಯ ವಸ್ತುವು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಆಸ್ತಿಯಾಗಿದ್ದು, ಅದನ್ನು ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಯಾರೂ ಉಪಯೋಗಿಸುವಂತಿಲ್ಲ.

8) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಕಾನೂನು ಮಹಾವಿದ್ಯಾಲಯಗಳು 20 ನವೆಂಬರ್ 2019 ರೊಳಗೆ ಲಗತ್ತಿಸಿದ ನೋಂದಣಿ ಅರ್ಜಿಯನ್ನು ಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಬೇಕು.

ಕಲ್ಪಿತ ನ್ಯಾಯಾಲಯ ಸ್ಪರ್ಧೆಯ ಕೆಲವು ವಿಶೇಷ ಗುಣಲಕ್ಷಣಗಳು:

1) ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಪ್ರತಿತಂಡಗಳು ವಾದ ಮತ್ತು ಪ್ರತಿವಾದ ಪತ್ರಗಳನ್ನು ಸಂಘಟಕರಿಗೆ ನೋಂದಣಿ ಸಮಯದಲ್ಲಿ ಸಲ್ಲಿಸಬೇಕು.

2) ಪ್ರತಿ ತಂಡಕ್ಕೆ ಒಟ್ಟು 30 ನಿಮಿಷ ಕಾಲಾವಧಿ ಇದ್ದು, ತಂಡದ ಪ್ರತಿ ಸ್ಪರ್ಧಾಳುವಿಗೆ ವಾದ ಮಂಡಿಸಲು ತಲಾ 15 ನಿಮಿಷ ಕಾಲಾವಕಾಶ ನೀಡಲಾಗುವದು.

3) ಒಟ್ಟು 100 ಅಂಕಗಳ ಆಧಾರದ ಮೇಲೆ ಪ್ರತಿ ತಂಡದ ಸಾಧನೆಯನ್ನು ನಿರ್ಧರಿಸಲಾಗುವದು.

4) ಲಿಖಿತ ವಾದ ಪತ್ರಗಳಿಗೆ ಪ್ರತ್ಯೇಕ 50 ಅಂಕಗಳನ್ನು ನಿಗದಿಪಡಿಸಲಾಗಿದೆ.

5) ಸ್ಪರ್ಧೆಯಲ್ಲಿ ಒಟ್ಟು 4 ಹಂತಗಳಿದ್ದು, ಇದರಲ್ಲಿ ನಿರ್ಗಮಿಸುವ ಸುತ್ತು, ಕ್ವಾರ್ಟರ್ ಫೈನಲ್ಸ್, ಸೆಮಿ ಫೈನಲ್ಸ್ ಮತ್ತು ಫೈನಲ್ ಸುತ್ತುಗಳು ಇರುತ್ತವೆ.

6) ಅ. **ನಿರ್ಗಮಿಸುವ ಸುತ್ತು:** ಚೀಟಿ ಎತ್ತಿದ ಪ್ರಕಾರ ಎಲ್ಲಾ ತಂಡಗಳು ಈ ಸುತ್ತಿನಲ್ಲಿ ಭಾಗವಹಿಸುತ್ತವೆ.

ಬ. ನಿರ್ಗಮಿಸುವ **ಸುತ್ತಿನಿಂದ** 50% ವಾದಿ ಕಡೆಯ ಮತ್ತು 50% ಪ್ರತಿವಾದಿ ಕಡೆಯ ತಂಡಗಳು ಕ್ವಾರ್ಟರ್ ಫೈನಲ್ ಸುತ್ತನ್ನು ತಲುಪುತ್ತಾರೆ.

ಕ. **ಸೆಮಿ ಫೈನಲ್ ಸುತ್ತು :** ಕ್ವಾರ್ಟರ್ ಫೈನಲ್‌ನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 4 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಸೆಮಿ ಫೈನಲ್ ತಲುಪುತ್ತಾರೆ.

ಇ. **ಫೈನಲ್ ಸುತ್ತು:** ಸೆಮಿ ಫೈನಲ್‌ನಲ್ಲಿ ಭಾಗವಹಿಸಿದ ಸ್ಪರ್ಧಾಳುಗಳಲ್ಲಿ ಒಟ್ಟು 2 ತಂಡಗಳು ಅವರು ಪಡೆದ ಅಂಕಗಳ ಆಧಾರದ ಮೇಲೆ ಫೈನಲ್ (ಅಂತಿಮ) ಸುತ್ತನ್ನು ತಲುಪುತ್ತಾರೆ.

**ಲಿಖಿತ ವಾದ ಪತ್ರಗಳನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ನಿಯಮಗಳು:**

1. ಲಿಖಿತ ವಾದ ಪತ್ರಗಳನ್ನು ಬಾಂಡ್ ಪೇಪರಿನ ಒಂದು ಬದಿಯಲ್ಲಿ ಟೈಪ್ ಮಾಡಿ, ಪ್ರತಿ ಸಾಲುಗಳ ನಡುವೆ (ಡಬಲ್ ಸ್ಪೇಸ್ ಲೈನಿಂಗ್) ಅಂತರ ಇರುವಂತೆ ಸಲ್ಲಿಸತಕ್ಕದ್ದು.

2. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಚಿಸುವ ಕಾನೂನು ಮಹಾವಿದ್ಯಾಲಯಗಳು ಸ್ಪರ್ಧೆಯ ದಿನ ನೋಂದಣಿಯ ಸಮಯದಲ್ಲಿ ಲಿಖಿತ ವಾದ ಪತ್ರಗಳನ್ನು ಸಲ್ಲಿಸತಕ್ಕದ್ದು.

3. ಬರವಣಿಗೆಯು 15 ಪುಟಗಳನ್ನು ಮೀರಿರಬಾರದು. ಅದರಲ್ಲಿ ಮುಖಪುಟ, ಪರಿವಿಡಿ, ಗ್ರಂಥಋಣ ಪಟ್ಟಿ, ಪ್ರಕರಣಗಳ ಪಟ್ಟಿ, ವಾದಗಳ ಸಾರಾಂಶ ವಿವಾದಾಂಶಗಳು/ಪ್ರಶ್ನೆಗಳು ಹಾಗೂ ಅನುಸೂಚಿಗಳು ಸೇರಿರುವುದಿಲ್ಲ.

4. ಲಿಖಿತ ವಾದ ಪತ್ರಗಳನ್ನು ವ್ಯವಸ್ಥಿತವಾಗಿ ಬೈಂಡ್ ಮಾಡಿ ಸಲ್ಲಿಸತಕ್ಕದ್ದು.

5. ಒಂದು ಸಲ ಸಲ್ಲಿಸಿದ ಲಿಖಿತ ವಾದ ಪತ್ರಗಳನ್ನು ಹಿಂದಿರುಗಿಸುವುದಿಲ್ಲ.

**ಸಮವಸ್ತ್ರ:** ಭಾರತದ ವಕೀಲ ಪರಿಷತ್ತು ಸೂಚಿಸಿದ ಸಮವಸ್ತ್ರವನ್ನು ಸ್ಪರ್ಧಾಳುಗಳು ಧರಿಸಬೇಕು.

ಬಹುಮಾನಗಳು:

1. ವಿಜೇತರು
2. ಎರಡನೇ ಸ್ಥಾನ
3. ಅತ್ಯುತ್ತಮ ವಾದ ಪತ್ರ
4. ಅತ್ಯುತ್ತಮ ಮಹಿಳಾ ನ್ಯಾಯವಾದಿ
5. ಅತ್ಯುತ್ತಮ ಪುರುಷ ನ್ಯಾಯವಾದಿ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ರಾಜ್ಯ ಮಟ್ಟದ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ–2019

ಭಾರತ ಪರಂಪರೆ ರಕ್ಷಣೆ ಒಕ್ಕೂಟ
ವಿರುದ್ಧ
ಭಾರತ ಸರಕಾರ*

ರಾಷ್ಟ್ರದಲ್ಲಿ ಅಂತರ್ ಜಾತಿಯ ಪ್ರೇಮಿಗಳು, ಅಂತರ್ ಜಾತಿಯ ವಿವಾಹವಾಗಲು ಇಚ್ಚಿಸುವವರು ಅಥವಾ ವಿವಾಹವಾದವರು, ವಿವಾಹಿತ ವ್ಯಕ್ತಿಗಳು ವಿವಾಹದಿಂದಾಚೆ ಸಂಬಂಧಗಳನ್ನು ಹೊಂದಿದವರು, ಸಾರ್ವಜನಿಕ ಸ್ಥಳಗಳಲ್ಲಿ ಪ್ರೇಮವನ್ನು ವ್ಯಕ್ತಪಡಿಸುವವರು, ಬಾರ್‌ಗಳಿಗೆ ಹೋಗುವ ಮಹಿಳೆಯರು, ತುಂಡು ಉಡುಗೆ ತೊಟ್ಟವರು, ಮುಂತಾದವರ ಮೇಲೆ ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆಗೆಂದು ಹುಟ್ಟಿಕೊಂಡ ನಾನಾ ಹೆಸರು ಮತ್ತು ಧೋರಣೆಯ ಸಂಘದ ಸದಸ್ಯರು ಹಲ್ಲೆ ಮಾಡುತ್ತಿರುವ ಘಟನೆಗಳು ಹೆಚ್ಚಾಗಿದ್ದವು. ಕೆಲವೊಂದು ಸಂದರ್ಭಗಳಲ್ಲಿ ಹಲವರನ್ನು ಹತ್ಯೆ ಮಾಡಿದ್ದು ಸರ್ವೋಚ್ಚ ನ್ಯಾಯಾಲಯವು, ಒಂದು ಪ್ರಕರಣದಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕಾಯ್ದೆಯೊಂದನ್ನು ಜಾರಿಗೊಳಿಸುವಂತೆ ಸಂಸತ್ತಿಗೆ ನಿರ್ದೇಶನ ನೀಡಿತ್ತು. ಈ ದಿಶೆಯಲ್ಲಿ ಸಂಸತ್ತು *ಆಯ್ಕೆಯ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವ ನೈತಿಕ ಪೊಲೀಸ್‌ಗಿರಿ ಮತ್ತು ಮರ್ಯಾದೆ ಹತ್ಯೆ ಪ್ರತಿಬಂಧಕ ಕಾಯ್ದೆ, 2019* ನ್ನು ರಚಿಸಿ ಜಾರಿಮಾಡಿದ್ದು, ಅದರ ಪ್ರಮುಖ ಲಕ್ಷಣಗಳು ಕೆಳಗಿನಂತಿವೆ.

1. ಪ್ರೀತಿ, ಪ್ರೇಮ, ವಿವಾಹ, ಉಡುಗೆ ಮತ್ತು ನಡವಳಿಕೆಗಳ ವಿಷಯದಲ್ಲಿ ಯಾವುದೇ ವಯಸ್ಸಿನ ವ್ಯಕ್ತಿಯ ಆಯ್ಕೆಗೆ ಯಾವುದೇ ರೀತಿಯಲ್ಲಿ ಅಡ್ಡಿಪಡಿಸುವುದು ಅಥವಾ ಆಯ್ಕೆಯನ್ನು ಬದಲಿಸುವಂತೆ ಒತ್ತಾಯ ಹೇರುವುದು ಶಿಕ್ಷಾರ್ಹ ಅಪರಾಧ. ಅಂತಹ ಅಪರಾಧವನ್ನು ಎಸಗಿದವರಿಗೂ, ಪ್ರಚೋದಿಸಿದವರಿಗೂ ಕನಿಷ್ಠ 3 ವರ್ಷ ಅವಧಿಯ ಶಿಕ್ಷೆ ಮತ್ತು 1 ಲಕ್ಷ ರೂಪಾಯಿ ದಂಡ; ಗರಿಷ್ಠ ಶಿಕ್ಷೆ 5 ವರ್ಷ ಮತ್ತು 3 ಲಕ್ಷ ರೂಪಾಯಿ ದಂಡ.
2. ಈ ಕಾಯ್ದೆಯಡಿಯ ಅಪರಾಧಗಳಿಗೆ ನಿರೀಕ್ಷಣಾ ಜಾಮೀನು ನೀಡುವಂತಿಲ್ಲ.
3. ಈ ಅಪರಾಧಗಳಲ್ಲಿ ಸಾಬೀತು ಮಾಡುವ ಹೊಣೆಗಾರಿಕೆ ಆರೋಪಿಯ ಮೇಲಿರುವುದು.

* ಪ್ರೊ.ಸಿ.ಎಸ್. ಪಾಟೀಲ, ಡೀನರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ. ಆಯೋಜಿಸಿದ ಏಳನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ 2019ಕ್ಕಾಗಿ ಈ ಸಮಸ್ಯೆಯನ್ನು ಬರೆದಿರುವರು.

4. ಈ ಕಾಯ್ದೆಯಡಿಯ ಅಪರಾಧಗಳು ಜಾಮೀನು ರಹಿತ ಮತ್ತು ಸಂಜ್ಞೇಯ ಅಪರಾಧಗಳು.
5. ಯಾವುದೇ ದೂರು ಬಂದಾಗ ತ್ವರಿತವಾಗಿ ಕ್ರಮ ಕೈಗೊಳ್ಳದ ಅಧಿಕಾರಿಗಳು ಅಪರಾಧಕ್ಕೆ ಪ್ರಚೋದನೆ ನೀಡಿದ್ದಾರೆಂದು ಭಾವಿಸಲಾಗುವುದು.
6. ವಿಚಾರಣೆಯು ವಿಶೇಷ ನ್ಯಾಯಾಲಯದಲ್ಲಿ ತ್ವರಿತವಾಗಿ ನಡೆಯ ತಕ್ಕದು.

ಈ ಕಾಯ್ದೆ ಜಾರಿಯಾದ ನಂತರ ಸ್ವೇಚ್ಛಾಚಾರ ಹೆಚ್ಚಾಗಿ, ಸಾರ್ವಜನಿಕ ಸ್ಥಳಗಳಲ್ಲಿ ಜನಸಾಮಾನ್ಯರಿಗೆ ಮುಜುಗರವಾಗುವ ವಾತಾವರಣ ಸೃಷ್ಠಿಯಾದ ಸಂದರ್ಭಗಳು ಹಲವಾದರೆ, ಬುದ್ಧಿ ಮತ್ತು ತಿಳುವಳಿಕೆ ಹೇಳಲು ಮುಂದಾದ ಪಾಲಕರು ಮತ್ತು ಹಿರಿಯರು ದಸ್ತಗಿರಿಯಾದ ಅನೇಕ ಘಟನೆಗಳು ವರದಿಯಾದವು. ಈ ಎಲ್ಲ ಬೆಳವಣಿಗೆಗಳಿಂದ ಗಾಬರಿಗೊಂಡ ಸಂಸ್ಕೃತಿ, ಪರಂಪರೆ, ನೀತಿ, ನಡತೆ, ಧರ್ಮ ಮತ್ತು ಮೌಲ್ಯಗಳನ್ನು ಪ್ರೋತ್ಸಾಹಿಸಿ ಬೆಳೆಸಲು ಸ್ಥಾಪಿತವಾದ ಅನೇಕ ಸಂಘ ಸಂಸ್ಥೆಗಳು "ಭಾರತ ಪರಂಪರೆ ರಕ್ಷಣೆ ಒಕ್ಕೂಟ" ವನ್ನು ಸ್ಥಾಪಿಸಿ ಸರ್ವೋಚ್ಛ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡಿ, *ಆಯ್ಕೆಯ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವ ನೈತಿಕ ಪೋಲೀಸ್‌ಗಿರಿ ಮತ್ತು ಮರ್ಯಾದೆ ಹತ್ಯೆ ಪ್ರತಿಬಂಧಕ ಕಾಯ್ದೆ, 2019* ಮೂಲಭೂತ ಹಕ್ಕು ಮತ್ತು ಕರ್ತವ್ಯಗಳಿಗೆ ವ್ಯತಿರಿಕ್ತವಾಗಿರುವುದರಿಂದ ಸಂವಿಧಾನಬಾಹಿರವಾಗಿದೆ ಎಂದು ಪ್ರಶ್ನಿಸಿದೆ.

# ನೊಂದಣಿ ಪತ್ರ

## ಏಳನೇಯ ಕನ್ನಡ ಕಲ್ಪಿತ ನ್ಯಾಯಾಲಯ ಸ್ಪರ್ಧೆ 23 ಮತ್ತು 24 ನವೆಂಬರ್ 2019

### ಹೆಸರು ಮತ್ತು ವಿಳಾಸ/ವಿದ್ಯಾ ಸಂಸ್ಥೆಯ ಹೆಸರು ಹಾಗೂ ಇ-ಮೇಲ್ ಮತ್ತು ದೂರವಾಣಿ ಸಂಖ್ಯೆ

1. ವಾದ ಮಂಡಿಸುವ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________
   ______________________
   ______________________
   ದೂರವಾಣಿ ಸಂಖ್ಯೆ :
   ಇ-ಮೇಲ್ :

   ಭಾವಚಿತ್ರ

2. ವಾದ ಮಂಡಿಸುವ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________
   ______________________
   ______________________
   ದೂರವಾಣಿ ಸಂಖ್ಯೆ :
   ಇ-ಮೇಲ್ :

   ಭಾವಚಿತ್ರ

3. ಸಂಶೋಧನಾ ವಿದ್ಯಾರ್ಥಿಯ ಹೆಸರು :
   ತರಗತಿ
   ವಿಳಾಸ : ______________________
   ______________________
   ______________________
   ದೂರವಾಣಿ ಸಂಖ್ಯೆ :
   ಇ-ಮೇಲ್ :

   ಭಾವಚಿತ್ರ

ಮಹಾವಿದ್ಯಾಲಯದ ಮುಖ್ಯಸ್ಥರ ಹೆಸರು ಹಾಗೂ ಮೊಹರು

* ಭಾವಚಿತ್ರಗಳನ್ನು ಮಹಾವಿದ್ಯಾಲಯದ ಪ್ರಾಚಾರ್ಯರು ದೃಢೀಕರಿಸಬೇಕು